International Journal of Applied Research 2021; 7(6): 292-295




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2021; 7(6): 292-295
www.allresearchjournal.com
Received: 04-04-2021
Accepted: 06-05-2021

**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕ
ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ಮತ್ತು ಸಂಶೋಧನಾ
ವಿಭಾಗ, ತುಮಕೂರು
ವಿಶ್ವವಿದ್ಯಾಲಯ, ತುಮಕೂರು

**Corresponding Author:**
**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕ
ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ಮತ್ತು ಸಂಶೋಧನಾ
ವಿಭಾಗ, ತುಮಕೂರು
ವಿಶ್ವವಿದ್ಯಾಲಯ, ತುಮಕೂರು

# ರಾಷ್ಟ್ರೀಯತೆ–ರಾಷ್ಟ್ರೀಯವಾದದ ಪರಿಕಲ್ಪನೆ : ಒಂದು ಅವಲೋಕನ

**ಶ್ರೀನಿವಾಸ**

## ಪೀಠಿಕೆ

‘ರಾಷ್ಟ್ರ’, ರಾಷ್ಟ್ರೀಯತೆ’ ಪರಿಕಲ್ಪನೆಗಳು ವಸಾಹತು ರಾಷ್ಟ್ರಗಳಲ್ಲಿ ಸ್ಥಾಪಿಸಿದ ಪ್ರಮುಖ ಪರಿಕಲ್ಪನೆಗಳು.ವಸಾಹತುಶಾಹಿ ಆಡಳಿತದ ಮೂಲಕ ಆಧುನಿಕಗೊಂಡ ರಾಷ್ಟ್ರೀಯತೆ ಎಂದರೆ ಒಂದು ಆಧುನಿಕ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಈ ಪರಿಕಲ್ಪನೆಗಳು ಇಂದು ಹಿಂದೆಂದಿಗಿಂತಲೂ ಅಭೂತಪೂರ್ವ ಮಹತ್ವವನ್ನು ಪಡೆದಿವೆ. ಮಾತ್ರವಲ್ಲದೇ ವಸಾಹತೀಕರಣಗೊಂಡಿರುವ ರಾಷ್ಟ್ರಗಳಲ್ಲಿ ಈ ಪರಿಕಲ್ಪನೆಗಳು ಬೇರೆಬ್ಬೃಎ ರೂಪ ವಿಧಾನಗಳಲ್ಲಿ ಮರು ಚರ್ಚೆ, ಮರು ನಿರೂಪಣೆಗೆ ಒಳಪಟ್ಟು ಈ ಪರಿಕಲ್ಪನೆಗಳ ಪ್ರಸ್ತುತತೆಯನ್ನು ಪ್ರಚುರಪಡಿಸುವ ವಿದ್ಯಮಾನಗಳು ಕಾಣಿಸಿಕೊಳ್ಳುತ್ತಿವೆ. ಭೌಗೋಳಿಕ ಚೌಕಟ್ಟಿನೊಳಗೆ ಗುರುತಿಸಿಕೊಂಡಿರುವ ಜನವರ್ಗವನ್ನು ಪ್ರತಿನಿಧಿಸುವಂತಾಹುದಾಗಿದೆ. ರಾಷ್ಟ್ರೀಯತೆ ಎನ್ನುವುದು ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಕಾಲಘಟ್ಟದ ಉತ್ಪನ್ನ. ಅದರ ರಾಜಕೀಯ ಮತ್ತು ಆರ್ಥಿಕ ದೃಷ್ಟಿಕೋನಗಳು ಆಯಾ ಕಾಲಘಟ್ಟದಲ್ಲಿ ನಿರ್ದಿಷ್ಟವಾದ ಆಕೃತಿಯನ್ನು ಪಡೆದುಕೊಳ್ಳುವ ಮೂಲಕ ಗತಕಾಲದ ಸಮಾಜೋ–ಆರ್ಥಿಕ ವ್ಯವಸ್ಥೆಯಿಮದ ಬೇರ್ಪಡುವ ವಿಧಾನವನ್ನು ವ್ಯಾಖ್ಯಾನಿಸುತ್ತದೆ. ಆದರೆ ಭಾರತದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯ ಸಾಕಾರದ ಬಗ್ಗೆ ದೀರ್ಘಕಾಲದಿಂದಲೂ ಚರ್ಚೆಗಳಾಗುತ್ತಿರುವುದನ್ನು ಗಮನಿಸಬಹುದು.

ವಸಾಹತುಶಾಹಿ ಪ್ರಭುತ್ವವನ್ನು ಎದುರಿಸಲು ದೇಶ ಏಕತ್ರವಾಗಿ ಕಂಡುಕೊಂಡ ಅಸ್ತ್ರ ‘ರಾಷ್ಟ್ರೀಯತೆ’. ರಾಷ್ಟ್ರೀಯತೆ ವಸಾಹತುಶಾಹಿಯ ಎರವಲು ಕಲ್ಪನೆ. ಬಹುಮುಖಿ ಸಮಾಜ ಸಂಸ್ಕೃತಿಯನ್ನು ಹೊಂದಿರುವ ಇಂಡಿಯಾ ದೇಶವನ್ನು ‘ಏಕೀಭಾವದ’ ನೋಟದಲ್ಲಿ ಹಿಡಿದಿಡುವ, ಪ್ರತಿಬಿಂಬಿಸುವ ಪ್ರಯತ್ನಗಳಿಗೆ ಪಾಶ್ಚಾತ್ಯ ಚಿಂತನಾ ನೆಲೆಗಳಿಂದ ಪ್ರೇರಣೆ ದೊರೆಯಿತು. ಪರಕೀಯತೆಯಿಂದ ಬಿಡುಗಡೆ ಪಡೆಯಲು ಮತ್ತು ಪಶ್ಚಿಮವು ಪೂರ್ವದ ಮೇಲೆ ಹೇರಿದ್ದ ಎಲ್ಲ ಬಗೆಯ ನಿಕೃಷ್ಟತೆ, ಕೀಳರಿಮೆಯಿಂದ ಪಾರಗಲು ಪ್ರತಿರೋಧದ ಅಸ್ತ್ರವಾಗಿ ಬಳಸಿದ್ದು ‘ರಾಷ್ಟ್ರೀಯತೆ’. ಬ್ರಿಟೀಷ್ ಪ್ರಭುತ್ವದ ವಿರುದ್ದ ನಡೆಸಲಾಗಿರುವ ಚಳವಳಿಯ ಉಪ ಉತ್ಪನ್ನ ರಾಷ್ಟ್ರೀಯತೆ ಎಂದರೆ ತಪ್ಪಲ್ಲ.

ಭಾರತೀಯ ರಾಷ್ಟ್ರೀಯವಾದ ವಸಾಹತುವಾದದ ಚಾರಿತ್ರಿಕ ಸಂದರ್ಭದಲ್ಲಿ ಕಾಣಿಸಿಕೊಂಡ ವಿದ್ಯಮಾನವಾಗಿರುವುದರಿಂದ ಭಾರತೀಯ ರಾಷ್ಟ್ರೀಯವಾದವನ್ನು ವಸಾಹತು ವಿರೋಧಿ ಹೋರಾಟದ ಲಕ್ಷಣವೆಂದೇ ಪರಿಗಣಿಸಲಾಗಿದೆ. ಯಾಕೆಂದರೆ ವಸಾಹತುವಾದ, ಆಧುನಿಕತೆ, ಬಂಡವಾಳವಾದವನ್ನು ಇಂತಹ ಕಡೆಗಳಲ್ಲಿ ಪರಸ್ಪರ ಸಂಬಂಧಿಸಿದ ಒಂದರೊಳಗೊಂದು ಸೇರಿಕೊಂಡ ವಿದ್ಯಮಾನಗಳೆಂದು ಭಾವಿಸಲಾಗಿದೆ. ಭಾರತೀಯ ರಾಷ್ಟ್ರೀಯವಾದವನ್ನು ಮುಂದಿಟ್ಟವರು ಹಿಂದೂ ಪ್ರಮುಖರು ಎಂಬುದು ಗಮನಾರ್ಹ. ಹೀಗಾಗಿ ಭಾರತೀಯ ರಾಷ್ಟ್ರೀಯವಾದ ಹಿಂದೂ ಸಂಸ್ಕೃತಿಯೊಳಗಿಂದ ಹಾಗು ಅದಕ್ಕೆ ವಿರೋಧವಾಗಿಯೂ ರೂಪುಗೊಂಡಿದೆ. ಹೀಗಾಗಿ ಭಾರತೀಯ ರಾಷ್ಟ್ರೀಯವಾದವನ್ನು ‘ರಾಜಕೀಯ ತಾತ್ವಿಕತೆ’ ಎಂದು ತಿಳಿಯದೆ ಸಾಂಸ್ಕೃತಿಕ ನೆಲೆಯಿಂದ ಅರ್ಥೈಸಬೇಕಾಗುತ್ತದೆ. ಹೀಗಾಗಿ ಭಾರತೀಯ ರಾಷ್ಟ್ರೀಯವಾದದ ಕರಿತು ಮಾತನಾಡುವಾಗ ರಾಷ್ಟ್ರೀಯವಾದದ ಉಗಮವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯೊಂದಿಗೆ ಜೋಡಿಸುವುದು ಸಾಧ್ಯವಿಲ್ಲ. ಯಾಕೆಂದರೆ ಭಾರತೀಯ ರಾಷ್ಟ್ರೀಯವಾದ ವಸಾಹತು ವಿರೋಧಿ ರಾಜಕೀಯ ಚಳವಳಿಯನ್ನು ಮುಖ್ಯ ಉದ್ದೇಶವಾಗಿ ಹೊಂದಿಲ್ಲ. ಅದು ಮುಖ್ಯವಾಗಿ ‘ಸಾಂಸ್ಕೃತಿಕ’ ನೆಲೆಗೆ ಸೇರಿದ್ದು, ವಸಾಹತು ವಿರೋಧಿ ರಾಜಕೀಯ ಚಳವಳಿ ಆರಂಭಗೊಳ್ಳುವುದಕ್ಕೆ ಮೊದಲೇ ಅಸ್ತಿತ್ವದಲ್ಲಿತ್ತು.

‘ಭಾರತೀಯ ರಾಷ್ಟ್ರ’ ಕಲ್ಪನೆ ಭಾರತೀಯ ಮೂಲದ್ದೇ ಆಗಿದೆ ಹೊರತು ಅದು ಪಶ್ಚಿಮದ ಕಲ್ಪನೆಯಲ್ಲ. ರಾಷ್ಟ್ರ ಎನ್ನುವುದು ‘ಕಲ್ಪಿತ’ವಾದದ್ದು. ಈ ಕಲ್ಪನೆ ‘ಪ್ರಿಂಟ್ ಕ್ಯಾಪಿಟಲಿಸಂ’, ಭೂನಕ್ಷೆ,

ಜನಗಣತಿಯಂತಹ ಸಾಧನಗಳ ಮೂಲಕ ಕಟ್ಟಲ್ಪಡುತ್ತದೆ. ಆದರೆ ಪಶ್ಚಿಮವು ರಾಷ್ಟ್ರೀಯವಾದದ ಮಾದರಿಗಳನ್ನು ಸೃಷ್ಟಿಸಿ ವಸಾಹತುಗಳಿಗೆ ರಫ್ತು ಮಾಡುತ್ತದೆ ಮತ್ತ ವಸಾಹತುಗಳು ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುತ್ತವೆ ಎನ್ನುವುದು ಒಪ್ಪತಕ್ಕದ್ದಲ್ಲ. ಅಂದರೆ ಭಾರತೀಯ ರಾಷ್ಟ್ರಕಲ್ಪನೆಗೆ ಜನಗಣತಿ, ಭೂನಕ್ಷೆ ಹಾಗೂ ಪ್ರಿಂಟ್ ಕ್ಯಾಪಿಟಲಿಸಂ ಬಾಹ್ಯ ಸಾಧನಗಳಾಗಿ ಒದಗಿ ಬಂದವೇ ವಿನಃ ಅವು ಭಾರತೀಯ ರಾಷ್ಟ್ರೀಯವಾದದ ಆಂತರಿಕ ಶಕ್ತಿಯಾಗಿರಲಿಲ್ಲ.

ಭಾರತೀಯ ರಾಷ್ಟ್ರೀಯವಾದ ತನ್ನ ಹೊರಕ್ಷೇತ್ರವಾಗಿ ಗುರುತಿಸುವ ಬ್ರಿಟೀಷ್ ಆಡಳಿತ ಪದ್ದತಿ, ತಂತ್ರಜ್ಞಾನ, ವಿದ್ಯಾಭ್ಯಾಸ, ರೈಲು ವ್ಯವಸ್ಥೆ–ಇವೆಲ್ಲಾ ನಿಜವಾದ ಅರ್ಥದಲ್ಲಿ ಯೂರೋಪಿನ ಮೂಲ ಮಾದರಿಯಿಂದ ಸಡಿಲಗೊಂಡು ಭಾರತೀಯ ಸಾಂಸ್ಕೃತಿಕ ವಿನ್ಯಾಸದ ಒಳಗೆ ಸೇರಿಕೊಂಡು ಬಿಟ್ಟವು. ಉದಾಹರಣೆಗೆ ಬ್ರಿಟೀಷ್ ಆಡಳಿತ ವ್ಯವಸ್ಥೆ ನೌಕರಶಾಹಿಯನ್ನು ರಾಶನಲೈಸ್ ಮಾಡಿತೇ ವಿನಃ ಅದರೊಳಗೆ ಹೊಸ ಮಾದರಿಯ ತಾರತಮ್ಯ ನೀತಿಯನ್ನು ಹುಟ್ಟು ಹಾಕಿತು. ವಸಾಹತೋತ್ತರ ಕಾಲದಲ್ಲಿ ಕೂಡಾ ಈ ನೀತಿ ಮುಂದುವರಿಯಿತು ಮತ್ತು ಹಿಂದೂಶ್ರೇಣೀಕೃತ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದ ವರ್ಗ 'ಮನೆ ಮತ್ತು ಜಗತ್ತು' ಎನ್ನುವ ದ್ವಂದ್ವಾತ್ಮಕತೆಯನ್ನು ಹುಟ್ಟು ಹಾಕಿಕೊಂಡಿತು. ರೈಲು, ಶಾಲೆ, ಆಫೀಸು ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿ ತಳಸ್ತರ ಸಮುದಾಯಗಳ ಜೊತೆ ಬೆರೆಯುವುದನ್ನು ಅನಿವಾರ್ಯವಾಗಿ ಒಪ್ಪಿಕೊಂಡ ಅದು ಮನೆಯಲ್ಲಿ ತನ್ನ ಮೂಲ ಸಂಸ್ಕೃತಿಯನ್ನು ಪರಿಷ್ಕರಣೆಯೊಂದಿಗೆ ಕಾಪಾಡಿಕೊಳ್ಳತೊಡಗಿತು.

ಭಾರತೀಯ ರಾಷ್ಟ್ರೀಯವಾದದ 'ಸಾಂಸ್ಕೃತಿಕ' ಮುಖವನ್ನು ಆ ಸಂದರ್ಭದಲ್ಲಿ ನಡೆದ ತಳಸ್ತರ ಸಮುದಾಯಗಳ ಚಳವಳಿಗಳ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳುವುದು ಹೆಚ್ಚು ಸೂಕ್ತ. ಹೀಗೆ ಅರ್ಥಮಾಡಿಕೊಳ್ಳುವುದರಿಂದ 'ಸಾಂಸ್ಕೃತಿಕ ಮುಖ'ದ ಹಿಂದೆ ಇರುವ ಭೌತಿಕ ಆಯಾಮಗಳನ್ನು ಅರಿಯಬಹುದು. ರಣಜಿತ್ ಗುಹರವರು ಹೇಳುವಂತೆ 'ವಸಾಹತು ಭಾರತದಲ್ಲಿ ದಬ್ಬಾಳಿಕೆಯನ್ನು ಎರಡು ರೀತಿಯಲ್ಲಿ ವಿವರಿಸಬೇಕಾಗುತ್ತದೆ. ಒಂದು ರೀತಿಯಲ್ಲಿ ಬ್ರಿಟೀಷ್ ಅಧಿಕಾರ ದಕ್ಷಿಣ ಏಷ್ಯಾದ ಜನರ ಮೇಲೆ ಆಡಳಿತ ನಡೆಸಿರುವುದು. ಎರಡನೆಯದಾಗಿ ದೇಶೀ ಪ್ರಮುಖರು ತಳಸ್ತರ ಜನರ ಮೇಲೆ ಅಧಿಕಾರ ಚಲಾಯಿಸಿರುವುದು'. ಹಾಗೆಯೇ ಭಾರತೀಯ ರಾಷ್ಟ್ರೀಯವಾದಕ್ಕೆ ದ್ವಿಮುಖ ನೀತಿ ಇದ್ದು, ಪಶ್ಚಿಮಕ್ಕೆ ಭಿನ್ನವಾಗಿ ರಾಷ್ಟ್ರೀಯ ಸಾಂಸ್ಕೃತಿಕ ನೆಲೆಗಳನ್ನು ಕಟ್ಟಿಕೊಳ್ಳುವುದು ಅದರ ಒಂದು ಮುಖವಾದರೆ ತಳಸ್ತರ ಸಮುದಾಯಗಳ 'ಭೌತಿಕ ಬೇಡಿಕೆ'ಗಳನ್ನು ರಾಷ್ಟ್ರೀಯವಾದದ ವೈಚಾರಿಕ ಆಕೃತಿಯ ಮೂಲಕ ವಿವರಿಸಿಕೊಳ್ಳುವುದು ಇನ್ನೊಂದು ಮುಖವಾಗಿದೆ.

ಇಂಡಿಯಾದಲ್ಲಿ ರಾಷ್ಟ್ರೀಯತೆಯ ಕಲ್ಪನೆ ಮೊದಲು ಮೂಡಿದ್ದು ವಿದ್ಯಾವಂತ ವರ್ಗದಲ್ಲಿ. ಪಶ್ಚಿಮವು ಹೇರಿದ್ದ ಕೀಳರಿಮೆಯನ್ನು ಕಳೆದುಕೊಳ್ಳಲು ಮತ್ತು ಬ್ರಿಟೀಷ್ ಪ್ರಭುತ್ವದೆದುರು ಸಮರ್ಥವಾಗಿ ನಿಲ್ಲಲು ವಿದ್ಯಾವಂತವರ್ಗ ರಾಷ್ಟ್ರೀಯತೆಯ ಲಕ್ಷಣಗಳನ್ನು ತನ್ನದಾಗಿಸಿಕೊಳ್ಳುವ ಪ್ರಯತ್ನಮಾಡಿತು. ಒಂದು ರಾಷ್ಟ್ರವು ತನ್ನದೇ ಆದ ಇತಿಹಾಸವನ್ನು ಒಳಗೊಂಡಿರಬೇಕು ಎಂಬುದು ರಾಷ್ಟ್ರೀಯತೆಯ ಬೇಡಿಕೆಯಾಗಿತ್ತು.ಅದಕ್ಕಾಗಿ ಬಹು ಭಾಷೆ, ಬಹುಸಂಸ್ಕೃತಿಗಳ ಭಾರತ ತನ್ನ ರಾಷ್ಟ್ರೀಯತೆಯನ್ನು ರೂಪಿಸಿಕೊಳ್ಳುವಾಗ ತನ್ನಲ್ಲಿರುವ ಎಲ್ಲ ಸ್ಥಳೀಯತೆಯ, ಭಿನ್ನತೆಗಳ ಅನನ್ಯತೆಯನ್ನು ಸ್ಥಾಪಿಸಲು ಅವಕಾಶ ನೀಡಿತು. ಭಾರತೀಯ ರಾಷ್ಟ್ರೀಯತೆಯಲ್ಲಿ ಎಲ್ಲ ಸಂಸ್ಕೃತಿ, ಜಾತಿ, ಭಾಷೆಗಳೂ ತಮ್ಮ ಪ್ರತಿನಿಧಿತ್ವವನ್ನು ಮುಂದಿಡುವುದು ಸಾಧ್ಯವಾಯಿತು.

**'ರಾಷ್ಟೀಯತೆ' ಪದದ ಅರ್ಥ**

'Nation' ಎಂಬುದಕ್ಕೆ ಸಂವಾದಿಯಾಗಿ 'ರಾಷ್ಟ್ರ' ಎಂಬ ಪದವನ್ನು ರೂಪಿಸಿಕೊಂಡಂತೆ, Nationality' ಎಂಬುದಕ್ಕೆ ಸಂವಾದಿಯಾಗಿ 'ರಾಷ್ಟ್ರೀಯತೆ' ಎಂಬ ಪದವನ್ನು ರೂಪಿಸಿಕೊಳ್ಳಲಾಗಿದೆ. ಈ ಓಚಿಣುಔಟಿಚಿಟುಣಥಿ ಎಂಬುದಕ್ಕೆ ಮೂಲ 'ನೇಟಸ್' ಎಂಬ ಲ್ಯಾಟಿನ್ ಪದ; ನೇಟಿಸ್ – ಎಂದರೆ ಹುಟ್ಟು ಅಥವಾ ಬುಡಕಟ್ಟು ಎಂದು ಅರ್ಥ ; ಅಂದರೆ ಒಂದೇ ಜನಾಂಗಕ್ಕೆ ಸೇರಿದವರೆಲ್ಲಾ ಒಂದೇ ರಾಷ್ಟ್ರೀಯತೆಯನ್ನು ಹೊಂದಿರುತ್ತಾರೆ ಎಂದು ಅರ್ಥ.

ಓಚಿಣುಔಟಿಚಿಟುಣಥಿ ಅಥವಾ ರಾಷ್ಟ್ರೀಯತೆ ಪದಗಳನ್ನು ಹಲವಾರು ಶಬ್ದಕೋಶಗಳು ಹೀಗೆ ಅರ್ಥೈಸಿವೆ : ಮೈಸೂರು ವಿಶ್ವವಿದ್ಯಾಲಯದ 'ಇಂಗ್ಲಿಷ್ ಕನ್ನಡ' ನಿಘಂಟಿನಲ್ಲಿ 'Nationality' ಎಂಬುದಕ್ಕೆ, 'ಜನಾಂಗ ಲಕ್ಷಣ, ರಾಷ್ಟ್ರೀಯತೆ, (ಒಂದು) ಜನಾಂಗ, (Men of all Nationalities), ಜನಾಂಗವಾಗಿರುವುದು, ಒಂದು ಅಥವಾ ಹೆಚ್ಚಿನ ರಾಜಕೀಯ ರಾಷ್ಟ್ರಗಳ ಭಾಗವಾಗಿರುವ ಕುಲ.

"A standard Dictionary of English Language" ನಲ್ಲಿ "Nationality" ಎಂಬುದಕ್ಕೆ ಹಲವಾರು ಅರ್ಥಗಳನ್ನು ಹೇಳಲಾಗಿದ್ದು ಅದರಲ್ಲಿ ಪ್ರಮುಖವಾದವುಗಳು ಹೀಗಿವೆ :

1. Attachment or Patriotic Devotion to one's own nation: Patriotism: Nationalism: as Zionism is the expression of Jewish nationality. (ಸ್ವರಾಷ್ಟ್ರದ ಬಗ್ಗೆ ಅಕ್ಕರೆ, ಪ್ರೀತಿ, ಮೋಹ, ಪ್ರೇಮ ಅಥವಾ ಸ್ವದೇಶಾಭಿಮಾನ, ದೇಶಭಕ್ತಿ ಹೊಂದಿರುವವರು, ಸ್ವದೇಶ ಪ್ರೇಮ, ದೇಶಭಕ್ತಿ, ರಾಷ್ಟಪ್ರೇಮ, ರಾಷ್ಟ್ರೀಯವಾದ, ಪ್ಯಾಲಿಸ್ಥೆನ ರಾಷ್ಟ್ರ ನಿರ್ಮಾಣದಲ್ಲಿ ಯಹೂದಿಯರು ಅಭಿವ್ಯಕ್ತಪಡಿಸಿದ ರಾಷ್ಟ್ರೀಯತೆಯ ಹಾಗೆ).
2. A people possessing national independence and unity nation: race; also a people united by a common religion tradition's language, or political aspirations. (ಜನ ರಾಷ್ಟ್ರದ ಸ್ವಾತಂತ್ರ್ಯ ಮತ್ತು ರಾಷ್ಟ್ರದ ಐಕ್ಯತೆಯನ್ನು ಬಯಸುವವರು, ಹೊಂದುವರು, ಅನುಭೋಗಿಸುವದು, ಒಂದು ಜನಾಂಗ ಹಾಗೂ ಒಂದು ಜನಾಂಗ ಪರಂಪರೆ, ಭಾಷೆ, ಧರ್ಮಗಳಿಂದ ಏಖತೆ ಹೊಂದುವ ರಾಜಕೀಯ ಹೆಬ್ಬಯಕೆ).

ಕಿಟಲ್ ಡಿಕ್ಷನರಿಯಲ್ಲಿ 'ರಾಷ್ಟ್ರೀಯ' (Rastreeya) ಎಂಬುದಕ್ಕೆ – Belonging or relating to a kingdom (ರಾಜ್ಯಕ್ಕೆ ಸಂಬಂಧಿಸಿರುವಿಕೆ)" – ಎಂದು ಅರ್ಥ ಹೇಳಲಾಗಿದೆ.

ಹೀಗೆ ಹಲವಾರು ಶಬ್ದಕೋಶಗಳು ಹಲವಾರು ರೀತಿಯಲ್ಲಿ ಅರ್ಥೈಸಿದ್ದರೂ ಅದರ ತಿರುಳು ಮಾತ್ರ ಒಂದೇಯಾಗಿದ್ದು 'Nationality' ಅಥವಾ 'ರಾಷ್ಟ್ರೀಯತೆ' ಎಂದರೆ ರಾಷ್ಟ್ರಕ್ಕೆ ಸಂಬಂಧಿಸಿದುದಾಗಿದೆ.

**ರಾಷ್ಟ್ರೀಯತೆಯ ವ್ಯಾಖ್ಯೆಗಳು**

ರಾಷ್ಟ್ರೀಯತೆಯನ್ನು ಕುರಿತು ಹಲವಾರು ರಾಜ್ಯಶಾಸ್ತ್ರಜ್ಞರು, ವಿದ್ವಾಂಸರು, ದಾರ್ಶನಿಕರು, ತಮ್ಮದೇ ಆದ ಅಭಿಪ್ರಾಯದಲ್ಲಿ ವ್ಯಾಖ್ಯಾನಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ನೋಡಬಹುದಾಗಿದೆ:

1. ಹ್ಯಾನ್ಸ ಕೊಹನ್ನರ ಪ್ರಕಾರ "ರಾಷ್ಟ್ರೀಯತೆಯು ಪ್ರಾಥಮಿಕವಾಗಿ ಒಂದು ಮನೋಸ್ಥಿತಿ, ಒಂದು ಪ್ರಜ್ಞಾಪೂರ್ವಕ ಕ್ರಿಯೆ".
2. ಪಾಮರ ಮತ್ತು ಪರ್ಕಿನ್ಸರ ಪ್ರಕಾರ "ರಾಷ್ಟ್ರದರ್ಶನವೆಂಬುದು ಲಾಭ – ನಷ್ಟಗಳ ಭಾವನೆಯಿಂದ ಸ್ವಲ್ಪ ಮಟ್ಟಿಗೆ ಪ್ರೇರಿತವಾಗಿದ್ದರೂ ಒಂದು ರಾಜ್ಯದ ಜನರನ್ನು ಸಂಘಟಿಸಿ ಅವರನ್ನು ರಾಷ್ಟೀಯ ಹಿತಾಸಕ್ತಿಗಳೆಂದು ಪರಿಗಣಿಸುವ ವಿಷಯಗಳಿಗಾಗಿ ಪಣತೊಟ್ಟು ಹೋರಾಡುವಂಥ ಇಚ್ಛೆಯನ್ನುಂಟು ಮಾಡುವ ಒಂದು ಮನೋಬಲ ಅಥವಾ ಆತ್ಮಬಲ."
3. ಅರವಿಂದರು ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸುತ್ತಾ "ದೇಶವೇ ರಾಷ್ಟ್ರೀಯತ್ವದ ಪ್ರತಿಷ್ಠಾನ ಭೂಮಿ, ತಮ್ಮ ದೇಶದ ಹಿತದಲ್ಲಿ ತಮ್ಮ ಹಿತವಿದೆ, ತಮ್ಮ ದೇಶದ ಗೌರವದಲ್ಲಿ ತಮ್ಮ ಗೌರವವಿದೆ, ತಮ್ಮ ದೇಶಬಾಂಧವರ ಉನ್ನತಿಯಲ್ಲಿ ತಮ್ಮ ದೇಶಬಾಂಧವರ ಉನ್ನತಿಯಲ್ಲಿ ತಮ್ಮ ಉನ್ನತಿಯಿದೆ ಎಂಬ ಕರ್ತವ್ಯ ಬುದ್ಧಿಯು ರಾಷ್ಟ್ರೀಯತೆಯ ಕುರುಹು"ಎಂದು ಅಭಿಪ್ರಾಯ ಪಟ್ಟಿದ್ದಾರೆ.
4. ಎ.ಎಸ್.ನಂಜುಂಡಸ್ವಾಮಿ ರಾಷ್ಟ್ರೀಯತೆಯನ್ನು ಕುರಿತು "ತಮಗೂ ಒಂದು ರಾಷ್ಟ್ರೀಯತ್ವವಿದೆ, ತಾವು ಒಂದು ರಾಷ್ಟ್ರಕ್ಕೆ ಸೇರಿದವರು – ಎಂಬ ಭಾವನೆ ಜನರಲ್ಲಿ ಎಂದು ಮೊಳೆಯುವುದೋ? ಅಂದೇ ರಾಷ್ಟ್ರೀಯತೆ ಅಂಕುರಿಸುವರು." ಎಂದಿದ್ದಾರೆ.
5. ಜವಹರಲಾಲ್ ನೆಹರೂರವರ ಪ್ರಕಾರ ರಾಷ್ಟ್ರೀಯತೆ ಎಂಬುದು "ರಾಷ್ಟ್ರೀಯ ಭಾವನೆಯು ಸಾಮೂಹಿಕವಾಗಿ ನಮ್ಮ ಸಾಧನೆ, ಸಂಪ್ರದಾಯ, ಸಂಸ್ಕೃತಿ, ಅನುಭವಗಳ ಗತಕಾಲದ ನೆನಪಿನ ಸಂಕೇತವಾಗಿದ್ದು, ಐಕ್ಯತೆಯ ದ್ಯೋತಕವಾಗಿದೆ." ನೆಹರೂರವರು ಹೇಳಿದ ರಾಷ್ಟ್ರೀಯತೆ ಮುಖ್ಯ ಲಕ್ಷಣಗಳು ಹೀಗಿವೆ:

1. ಧಾರ್ಮಿಕ ಸಂಕುಚಿತ ದೃಷ್ಟಿಯಿಂದ ಮುಕ್ತವಾದುದು.
2. ವಿದೇಶಿಯರ ಪ್ರಭುತ್ವಕ್ಕೆ ವಿರೋಧವಾದುದು.
3. ಗತ ಕಾಲದ ಸಾಧನೆ, ಸಂಪ್ರದಾಯ, ಅನುಭವ, ರೂಢಿ, ಸಂಪ್ರದಾಯಗಳ ಜ್ಞಾಪಕ ಶಕ್ತಿಯಾಗಿದೆ.
4. ರಾಷ್ಟ್ರೀಯತ್ವವು ರಾಷ್ಟ್ರದ ಏಕತೆ, ಸಮಗ್ರತೆ, ಭದ್ರತೆಯ ಪ್ರತೀಕವಾದುದು.
5. ಹಿಂದೂ ರಾಷ್ಟ್ರೀಯವಾದ ಅಥವಾ ಮುಸ್ಲಿಂ ರಾಷ್ಟೀಯವಾದ ಎಂಬುದಕ್ಕೆ ಬದಲಾಗಿ ಭಾರತೀಯ ರಾಷ್ಟ್ರೀಯವಾದವನ್ನು ಪ್ರತಿಪಾದಿಸಿದ್ದರು ಹಾಗೂ ಭಾರತೀಯ ರಾಷ್ಟ್ರೀಯವಾದವಿರಬೇಕು" ಎಂದಿದ್ದಾರೆ.

ಒಟ್ಟಿನಲ್ಲಿ ರಾಷ್ಟ್ರದ ಹಿತ, ರಾಷ್ಟ್ರದ ಒಗ್ಗಟ್ಟು, ಮತ್ತು ರಾಷ್ಟ್ರದ ಸ್ವಾತಂತ್ರ್ಯದ ಬಗ್ಗೆ ಆಸ್ಥೆಯನ್ನು ಹೊಂದಿರುವುದೇ 'ರಾಷ್ಟ್ರೀಯತೆ'. ಮುಂದುವರಿದು, ಲೆನಿನ್ನರು ತಮ್ಮ 'ಪಾಶ್ಚಾತ್ಯ ನಾಡುಗಳಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ' ಎಂಬ ಕೃತಿಯಲ್ಲಿ 'ರಾಷ್ಟ್ರೀಯತೆ' ಎನ್ನುವುದು "ಬಂಡವಾಳಶಾಹಿಯ ಚಾರಿತ್ರಿಕ ಘಟ್ಟದ ಸೃಷ್ಟಿ" ಎಂದು ವಿವರಿಸಿದ್ದಾರೆ. ಇನ್ನು ಭಾರತದ ಮಟ್ಟಿಗೆ ಹೇಳುವುದಾದರೆ, ಗಾಂಧೀಜಿಯವರು ಏಕಕಾಲದಲ್ಲಿಯೇ ಭಾರತವನ್ನು ರಾಷ್ಟ್ರವಾಗಿಯೂ, ಸಮಾಜವಾಗಿಯೂ ಕಂಡರು. ರಾಷ್ಟ್ರೀಯತೆ ಭಾವೈಕ್ಯತೆಯ ನೆಲೆಯಾಗಿ ಜನರೆಲ್ಲರನ್ನು ಒಟ್ಟು ಮಾಡಿದರು. ಗಾಂಧೀಜಿಯವರಿಗೆ 'ಭಾರತ' ಎಂದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಹಲವಾರು ವೈಶಿಷ್ಟ್ಯಗಳ ಸಂಘರ್ಷಗಳ ಕ್ಷೇತ್ರ. ವರ್ಗ–ವರ್ಗಗಳ ನಡುವಿನ ಸಂಘರ್ಷಣೆಯ ಪ್ರದೇಶ.'

ಡಾ.ಅಂಬೇಡ್ಕರ್ ರಾಷ್ಟ್ರೀಯತೆಗೆ ಸಂಬಂಧಿಸಿದಂತೆ "ರಾಷ್ಟ್ರ, ರಾಷ್ಟ್ರತ್ವ ಮತ್ತು ರಾಷ್ಟ್ರೀಯತೆಯನ್ನು ಸಾಂಸ್ಥಿಕ ಮನೋಭಾವ ಮತ್ತು ಮನಶಾಸ್ತ್ರೀಯ ಅನುಭವದ ಪರಿಭಾಷೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಮಾತ್ರವಲ್ಲ ಭಾರತದಲ್ಲಿ ಭೌಗೋಳಿಕ ಐಕ್ಯತೆ ಇದ್ದರೂ ಒಂದಾಗಿ ಬದುಕುವ ಹಂಬಲ ಇಲ್ಲಿನ ಜನಗಳಿಗಿಲ್ಲ. ಭೌಗೋಳಿಕ ಐಕ್ಯತೆ ಇಲ್ಲದಿರುವ ಸಂದರ್ಭದಲ್ಲೂ ಒಂದಾಗಿ ಬದುಕುವ ಹಂಬಲ ಅತೀವವಾಗಿರಬಹುದು. ಹಾಗೆಯೇ ಸಾಂಸ್ಕೃತಿಕ ಐಕ್ಯತೆ ಇದ್ದರೂ ಒಂದಾಗಿ ಬದುಕುವ ಹಂಬಲ ಇಲ್ಲದಿರಬಹುದು. ಆರ್ಥಿಕ ಸಂಘರ್ಷ ಮತ್ತು ವರ್ಗ ವಿಭಜನೆಗಳಿದ್ದಾಗಲೂ ಐಕ್ಯತೆ ಇರುವ ಸಾಧ್ಯತೆಗಳಿವೆ. ವಸ್ತುಸ್ಥಿತಿ ಏನೆಂದರೆ ರಾಷ್ಟ್ರೀಯತೆ ಎಂದರೆ ಅದು ಭೌಗೋಳಿಕ ವಿವರ ಅಥವ ಸಾಂಸ್ಕೃತಿಕ ಸಂಗತಿಗಳಿಗೆ ಅಥವ ಇನ್ನಾವುದಕ್ಕೊ ಸಂಬಂಧಿಸಿದ ವಿಷಯ ಮಾತ್ರ ಅಲ್ಲ." ಎಂದು ತಮ್ಮ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಸಾದರಪಡಿಸುತ್ತಾರೆ. ಮುಂದುವರಿದು, "ಒಂದು ರಾಜ್ಯ, ಒಂದು ಭಾಷೆ" ಎಂಬುದು ಬಹುಮಟ್ಟಿಗೆ ವಿಶ್ವದ ಪ್ರತಿಯೊಂದು ರಾಷ್ಟ್ರದ ಲಕ್ಷಣ. ಈ ನಿಯಮದ ಉಲ್ಲಂಘನೆ ಎಲ್ಲೆಲ್ಲಿ ಆಗಿದೆಯೋ ಅಲ್ಲೆಲ್ಲಾ ರಾಜ್ಯಕ್ಕೆ ಅಪಾಯ ಒದಗಿದೆ. ಪ್ರಾಚೀನ ಆಸ್ಟ್ರಿಯನ್ ಸಾಮ್ರಾಜ್ಯ ಮತ್ತು ಪ್ರಾಚೀನ ಟರ್ಕಿ ಸಾಮ್ರಾಜ್ಯಗಳು ಸಂಕೀರ್ಣ ರಾಜ್ಯಗಳಿಗೆ ದೃಷ್ಟಾಂತಗಳು. ಅವು ಎಲ್ಲಾ ಅರ್ಥದಲ್ಲಿಯೂ ಬಹುಭಾಷಾ ರಾಷ್ಟ್ರಗಳಾಗಿದ್ದವು. ಬಹು ಭಾಷಾ ರಾಷ್ಟ್ರಗಳಾಗಿದ್ದರಿಂದಲೇ, ಅವು ಸಿಡಿದು ಹೋದವು. ಭಾರತವು ಸಂಕೀರ್ಣ ರಾಜ್ಯಗಳ ಸಮೂಹವಾಗಿ ಮುಂದುವರಿದರೆ, ಅಂತಹ ದುರದೃಷ್ಟದಿಂದ ಪಾರಾಗಲಾರದು .ಏಕಭಾಷಾ ರಾಜ್ಯವು ಸ್ಥಿರವಾಗಿರುತ್ತದೆ. ಬಹುಭಾಷಾ ರಾಜ್ಯವು ಅಸ್ಥಿರವಾಗಿರುತ್ತದೆ ಎಂಬುದಕ್ಕೆ ಕಾರಣ ಸುಸ್ಪಷ್ಟ' ಎನ್ನುತ್ತಾರೆ.

ಒಟ್ಟಾರೆ, ಭಾರತ ಒಂದು ಉಪಖಂಡವೆಂದು ಖ್ಯಾತಿ ಪಡೆದಿದೆ. ಇಲ್ಲಿನ ಭೌಗೋಳಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಾತಾವರಣಕ್ಕೆ ಜಾಗತಿಕ ಸ್ಥಾನಮಾನವಿದೆ. ವೈವಿಧ್ಯತೆಯ ಆಗರವಾಗಿರುವ ಭಾರತದ ಒಟ್ಟು ವ್ಯಾಪ್ತಿ ಬಹು ವಿಸ್ತಾರವಾದುದು. ಇಲ್ಲಿನ ರಾಷ್ಟ್ರೀಯತೆ ಬಗೆಗಿನ ಜಿಜ್ಞಾಸೆ ತುಂಬಾ ಸಂಕೀರ್ಣವಾದುದಾಗಿದ್ದು ಹೆಚ್ಚಿನ ಅಧ್ಯಯನಗಳು ನಡೆಯ ಬೇಕಾದ ಅಗತ್ಯತೆ ಇದೆ.

## ಪರಾಮರ್ಶನಗ್ರಂಥಗಳು


1. ಚಂದ್ರಶೇಖರ್.ಎಸ್., 1983, ಸಾಮಾಜಿಕ ಹಿನ್ನಲೆಯಲ್ಲಿ ಮೈಸೂರು ರಾಜಕೀಯ–ಕೆಲವು ಒಳನೋಟಗಳು, ಬೆಂಗಳೂರು, ಅಂಕಣ ಪ್ರಕಾಶನ
2. ಚಂದ್ರಶೇಖರ್ ಎಸ್.,2001, ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
3. ಗೋವಿಂದರಾಜು.ಸಿ.ಆರ್.,1998, ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್
4. ಪಾರ್ಥಚಟರ್ಜಿ ಮತ್ತು ಗ್ಯಾನೇಂದ್ರ ಪಾಂಡೆ., (ಸಂ), 1990,
5. ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರೆಹಗಳು–ಭಾಷಣಗಳು:ಸಂಪುಟ–1,ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2010

6. ಸುಮಾ.ಬಿ.ಯು,ಅಂಬೇಡ್ಕರ್ ಮತ್ತು ರಾಷ್ಟ್ರೀಯತೆ : ವರ್ತಮಾನದ ಕೆಲವು ಸಂಧಿಗ್ಧತೆಗಳು ಲೇಖನ, ಸಂವಾದ, ವಾರ್ಷಿಕ ವಿಶೇಷಾಂಕ–2005
7. ಶಿವರಾಮ ಪಡಿಕ್ಕಲ್.,2001, ನಾಡುನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ